ಕಲೆಯು ಕಲಾವಿದನಿಗಿಂತ ದೊಡ್ಡದು ಎಂಬುದನ್ನು ಸದಾ ಮನದಲ್ಲಿಟ್ಟುಕೊಳ್ಳಬೇಕು. ಜೀವಾತ್ಮನಿಗಿಂತ ಪರಮಾತ್ಮ ದೊಡ್ಡದು. ಕಲಾವಿದನಿಗೆ ಸಾವಿದೆ, ಆದರೆ ನನ್ನ ಜೀವಿತಾವಧಿಯಲ್ಲಿ ನನ್ನ ಈ ದೇಹದ ಮೂಲಕ ಪ್ರತಿಪಾದನೆಗೊಂಡು ಪ್ರೇಕ್ಷಕರನ್ನು ತಲುಪಿದ ಕಲೆಗೆ ಎಂದಾದರೂ ಸಾವಿದೆಯೇ ? ಅದು ಶಾಶ್ವತವಾದುದು. ಅದು ವಿಕಾಸ ಹೊಂದುತ್ತಾ ಸಾಗುವಂತಹುದು. ದೇಹವು ಅಳಿದರೆ, ಕಲೆಯು ಭೋರ್ಗರೆಯುವ ನದಿಯಂತೆ ಮತ್ತೊಂದು ದೇಹವನ್ನು ಹುಡುಕಿಕೊಂಡು ಓಡುತ್ತದೆ. ಅಲ್ಲಿ ಮತ್ತೆ ಸಾಕ್ಷಾತ್ಕಾರ ಪಡೆಯುತ್ತದೆ. ಈ ಬೃಹತ್ ಕಲಾಸಾಗರದಲ್ಲಿ ನಾವೊಂದು ಹನಿಯಷ್ಟೇ ಎಂಬ ವಿನಯವಿದ್ದಾಗ ಹೆಚ್ಚು ಹೆಚ್ಚು ಕಲಿಯುತ್ತ ಹೋಗಬಹುದು. ಈ ಅರಿವು ಮೂಡಿದಾಗ ನಾವು ನಿಜವಾಗಿಯೂ ಉತ್ತಮ ಕಲಾವಿದರಾಗುತ್ತೇವೆ.

◆ **ಕಲಾವಿಮರ್ಶೆಯು ಇತ್ತೀಚೆಗೆ ವಿರಳವಾಗುತ್ತಿದೆ ಎಂಬ ಆರೋಪವಿದೆ. ಆದರೆ ವಿಮರ್ಶಾ ಪ್ರಕಾರದ ಬಗ್ಗೆ ಬಗ್ಗೆ ನಿಮ್ಮ ನಿಲುವು ಬಹಳ ಕಡಕ್ ಆಗಿರುವಂತಿದೆ....ಅನೇಕ ಉಪನ್ಯಾಸಗಳಲ್ಲಿ ನೀವು ಭರತನಾಟ್ಯದ ಒಟ್ಟಂದಕ್ಕೆ ಧಕ್ಕೆ ಬರುತ್ತಿರುವ ಬಗ್ಗೆ ಆತಂಕ ವ್ಯಕ್ತ ಪಡಿಸಿದ್ದುಂಟು.**

ಸಾಮಾನ್ಯವಾಗಿ ನಾವು ಲಲಿತಕಲೆಗಳೆಲ್ಲವನ್ನೂ ಒಂದೇ ವಲಯದಲ್ಲಿಟ್ಟುಬಿಡುತ್ತೇವೆ. ವಿಮರ್ಶೆಗಳೂ ಕೂಡ ಎಲ್ಲ ಕಲಾಪ್ರಕಾರಗಳಿಗೆ ಅನ್ವಯಿಸಿದಂತೆ ಬರುತ್ತವೆ. ಆದರೆ ಗಂಭೀರವಾಗಿ ಯೋಚಿಸಿದರೆ, ಎಲ್ಲ ವಿಚಾರಗಳನ್ನೂ ಒಂದೇ ತಕ್ಕಡಿಯಲ್ಲಿಟ್ಟು ಮಾತನಾಡುವುದಕ್ಕಾಗದು. ಉದಾಹರಣೆಗೆ ನೃತ್ಯಕ್ಷೇತ್ರದಲ್ಲಿ ಸಾಧಾರಣವಾದ ಗುಣಮಟ್ಟವನ್ನೂ ರಸಿಕರು ಸ್ವೀಕರಿಸಿಬಿಡುವ ಪರಿಪಾಠವಿದೆ. ಯಾಕೆಂದರೆ ನೃತ್ಯವೆಂಬುದು ತೀರಾ ವೈಯಕ್ತಿಕವಾದುದು, ಅಥವಾ ವ್ಯಕ್ತಿನಿಷ್ಠ ಎನ್ನಬಹುದು. ಒಂದು ಟೆನ್ನಿಸ್ ಪಂದ್ಯವನ್ನು ತೆಗೆದುಕೊಂಡರೆ, ಅದರಲ್ಲಿ ಗೆದ್ದವರು, ಗೆದ್ದರೆಂದಷ್ಟೇ ಅರ್ಥ. ಅದು ಕಪ್ಪು ಬಿಳುಪು ಮಾದರಿಯ ನಿರ್ಧಾರವಾಗಿರುತ್ತದೆ. ಆದರೆ ನೃತ್ಯದಲ್ಲಿ ಹಾಗಲ್ಲ. ಸಂಗೀತದಲ್ಲಾದರೂ, ಗಾಯಕರು ಶ್ರುತಿ ತಪ್ಪಿದರೆ, ತಾಳ ತಪ್ಪಿದರೆ ಶ್ರೋತೃಗಳಿಗೆ ತಕ್ಷಣವೇ ಅರ್ಥವಾಗುತ್ತದೆ. ಈ ರಾಗವು ಹಾದಿ ತಪ್ಪಿದೆ ಎಂದು ಪರಿಗಣಿಸಬಲ್ಲರು. ಆದರೆ ನೃತ್ಯದಲ್ಲಿ ಈ ರೀತಿಯಾದಾಗ, ಸುಳಿವು ಕೊಡದಂತೆ ಮುಂದುವರೆಯುವ ಅವಕಾಶಗಳು ಇರುತ್ತವೆ. ರಂಗದಲ್ಲಿ ಎಲ್ಲವನ್ನೂ ನಿಭಾಯಿಸಿಕೊಂಡು ಮುಂದುವರೆಯುವ ಚಾಕಚಕ್ಯತೆ ಇರುತ್ತದೆ. ಕಲಾರಸಿಕರೂ ಕಲಾವಿದರ ಈ ಸಾಧಾರಣ ನಡೆಯನ್ನು ಕ್ಷಮಿಸಿ ಸ್ವೀಕರಿಸಿಬಿಡುತ್ತಾರೆ. ಈ ಚಾಕಚಕ್ಯತೆಯು ಒಬ್ಬೊಬ್ಬರು ಕಲಾವಿದರಿಗೆ ಒಂದೊಂದು ರೀತಿಯಲ್ಲಿ ತಿಳಿದಿರುತ್ತದೆ ಎಂದುಕೊಳ್ಳೋಣ. ನಿರ್ದಿಷ್ಟ ಸಂದರ್ಭದಲ್ಲಿ, ಒಟ್ಟಾರೆ ಪ್ರದರ್ಶನದಲ್ಲಿ ಇದನ್ನು ತಪ್ಪು ಎಂದು ಹೇಳಲಾಗದು. ಆದರೆ ಒಟ್ಟಾರೆ ಭರತನಾಟ್ಯ ಕಲೆಯನ್ನು ಬೃಹತ್ ಚೌಕಟ್ಟಿನಲ್ಲಿಟ್ಟು ಗಮನಿಸಿದಾಗ, ಇದರಿಂದಾಗಿ ಕಲಾನೈಪುಣ್ಯತೆಯ ಉತ್ಕೃಷ್ಟತೆಗೆ ಇರಬೇಕಾದ ನಿಷ್ಠೆ ಕಡಿಮೆಯಾದಂತೆ ಅನಿಸುವುದಿಲ್ಲವೇ. ಈ ರೀತಿಯ ಚಿಕ್ಕಪುಟ್ಟ ನಿಭಾಯಿಸುವಿಕೆಗಳು ಕಲಾಪ್ರಕಾರದ ಒಟ್ಟಂದವನ್ನು ಹಾಳು ಮಾಡುತ್ತವೆ. ಕಲಾಪ್ರಕಾರದ ಸೌಂದರ್ಯಕ್ಕೆ ಧಕ್ಕೆಯಾದರೆ ಅದು ಪರೋಕ್ಷವಾಗಿ, ಹೀಗೆ ಸಾಧಾರಣತೆಯ ಮರೆಯಲ್ಲಿ ಪ್ರದರ್ಶನಗಳನ್ನು ನಿಭಾಯಿಸಿದ ಅದೇ ಕಲಾವಿದರ ಏಳಿಗೆಗೂ ತೊಂದರೆಯಾದಂತೆ. 'ನೀವು ನೃತ್ಯ ಕ್ಷೇತ್ರದಲ್ಲಿ ಮಾಡಿದ ಅಭ್ಯಾಸ ಇನ್ನೂ ಸಾಕಾಗಿಲ್ಲ. ತಾಲೀಮು ಇನ್ನೂ ಚೆನ್ನಾಗಿ ಆಗಬೇಕಿತ್ತು, ಇದೊಂದು ಅಂಶ ಸರಿಯಾಗಿ ವ್ಯಕ್ತವಾಗಲಿಲ್ಲ..' ಎಂಬೆಲ್ಲ ಕಿವಿಮಾತುಗಳನ್ನು ಕಲಾವಿದರಿಗೆ ಹೇಳುವ ಗುರುಗಳಾಗಲೀ, ಆಯೋಜಕರಾಗಲೀ, ವಿಮರ್ಶಕರಾಗಲೀ ಇಂದು ನಮ್ಮ ಕ್ಷೇತ್ರದಲ್ಲಿ ಬಹಳವೇ ಕಡಿಮೆಯಾಗಿದ್ದಾರೆ. ಹೀಗೆ ಕಡಕ್ ಆಗಿ ಹೇಳುವುದರಿಂದ ಕಲಾವಿದರಿಗೆ ಆ ಕ್ಷಣಕ್ಕೆ ನೋವಾಗಬಹುದು. ಆದರೆ ಅವರು ನಿಜವಾಗಿಯೂ ಕಲೆಯ ಏಳ್ಗೆಗೆ ತಮ್ಮ ಜೀವನವನ್ನು ಸಮರ್ಪಿಸಿಕೊಂಡು ಬದ್ಧರಾಗಿದ್ದರೆ, ಈ ಟೀಕೆಗಳನ್ನು ಸ್ವೀಕರಿಸುತ್ತಾರೆ. ಇದಲ್ಲದೇ ಹೋದಲ್ಲಿ ಕಲಾವಿದರು, ಸ್ವ ವಿಮರ್ಶೆ ಮಾಡಿಕೊಳ್ಳುವಲ್ಲಿ ತಮಗೆ ತಾವೇ ರಿಯಾಯಿತಿಯನ್ನು ಕೊಟ್ಟುಕೊಳ್ಳಬಾರದು ಎಂದು ನಾನು ಭಾವಿಸುವೆ. ಒಟ್ಟಿನಲ್ಲಿ ನನ್ನ ಕಾಳಜಿ ಇರುವುದು ಈ ಪುರಾತನವಾದ ಕಲಾಪ್ರಕಾರವು, ಅದರ ಉತ್ಕೃಷ್ಟತೆಯನ್ನು ಕಳೆದುಕೊಳ್ಳುವುದು, ಅದರಲ್ಲಿ ಇತರ ಹತ್ತಾರು ವಿಚಾರಗಳು ಸೇರಿ ತೆಳುವಾಗುತ್ತಾ ಹೋಗುವುದು